Indian Journal of History and Archaeology

ISSN (E):2582-225X
VOL-2, ISSUE -2, JULY-AUGUEST, 2020, 56-61

# ಹೆಡೆತಲೆ ಗ್ರಾಮದ ಲಕ್ಷ್ಮೀಕಾಂತ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ–ಒಂದು ಅವಲೋಕನ

**ಅರುಣಕುಮಾರ, ಹೆಚ್.ಆರ್.**

**ಅರುಣಕುಮಾರ,ಹೆಚ್.ಆರ್.**
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಭಾರತೀಯ ಸಂಸ್ಕೃತಿಗಿರುವಂತೆ ಕನ್ನಡ ಸಂಸ್ಕೃತಿಗೂ ಸುದೀರ್ಘ ಪರಂಪರೆ ಇದೆ. ಈ ಪರಂಪರೆಯ ಎಲ್ಲಾ ರೀತಿಯ ಸತ್ವಸಾರಗಳನ್ನು ಹೀರಿ ಬೆಳೆದ ನಂಜನಗೂಡು ತಾಲೂಕಿನ ಹಲವು ಸ್ಥಳಗಳು ಇತಿಹಾಸದ ಸೊಗಡನ್ನು ವಾಸ್ತುಶಿಲ್ಪದ ಸೌಂದರ್ಯವನ್ನು ಒಳಗೊಂಡು ಭವ್ಯ ಇತಿಹಾಸವನ್ನು ಸೃಷ್ಟಿಸಿದೆ ಎಂದರೆ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ನಂಜನಗೂಡಿನಿಂದ ಆಗ್ನೇಯಕ್ಕೆ ಸು. 14 ಕಿ.ಮೀ. ದೂರದಲ್ಲಿರುವ ಗ್ರಾಮವೇ ಈ ಹೆಡತಲೆ. ಇದು ಐತಿಹಾಸಿಕವಾಗಿ, ಧಾರ್ಮಿಕವಾಗಿ ಹೆಚ್ಚು ಮಹತ್ವ ಪಡೆದಿದ್ದು ಇಲ್ಲಿ ಹೊಯ್ಸಳರ ಕಾಲದ ಲಕ್ಷ್ಮೀಕಾಂತ ದೇವಾಲಯವು ಕಂಡು ಬಂದಿದ್ದು ಸು. ೮೦೦ ವರ್ಷಗಳ ಕಾಲದ ಹೊಯ್ಸಳ ಶೈಲಿಯ ಕಲಾವೈಭವವನ್ನು ಹೊಂದಿದ್ದು ತ್ರಿಕೂಟಾಚಲ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಮೂಲ ಗರ್ಭಗೃಹದಲ್ಲಿ ಸುಂದರವಾದ ಲಕ್ಷ್ಮೀಕಾಂತನ ವಿಗ್ರಹವಿದೆ, ಇದರ ಬಲಪಾರ್ಶ್ವದಲ್ಲಿ ಉತ್ತರಾಭಿಮುಖನಾಗಿರುವ ವೇಣುಗೋಪಾಲ, ಎಡಪಾರ್ಶ್ವದಲ್ಲಿ ದಕ್ಷಿಣಾಭಿಮುಖನಾಗಿರುವ ಲಕ್ಷ್ಮಿನರಸಿಂಹಸ್ವಾಮಿಯ ಸನ್ನಿಧಿಯೂ ಇದೆ. ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪ ಹಾಗೂ ಹದಿನಾರು ಮುಖದ ಚಾವಡಿಯನ್ನು ಒಳಗೊಂಡಿದೆ.

**ಮೊದಲನೇ ಗರ್ಭಗೃಹ**: ಈ ದೇವಾಲಯದ ಗರ್ಭಗೃಹವು ಸು. 5 ಅಡಿ ಉದ್ದ ಮತ್ತು 5 ಅಡಿ ಅಗಲವಾದ ವಿಸ್ತೀರ್ಣವನ್ನು ಹೊಂದಿದ್ದು ಮಧ್ಯಭಾಗದಲ್ಲಿ 1.5 ಅಡಿ ಎತ್ತರದ ಪಾಣಿಪೀಠದ ಮೇಲೆ ಐದು ಅಡಿ ಎತ್ತರದ ಲಕ್ಷ್ಮೀಕಾಂತನ ಮೂರ್ತಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದ್ದು ಇದು ಕಪ್ಪು ಗ್ರಾನೈಟ್ ಶಿಲೆಯಿಂದ ಕೂಡಿದ್ದಾಗಿದೆ. ಇದರ ಮೇಲ್ಭಾವಣಿಯಲ್ಲಿ ಭುವನೇಶ್ವರಿಯಿದ್ದು ಇದು ೩ ಅಡಿ ಆಳವಾಗಿದ್ದು ತುಂಬಾ ಆಕರ್ಷಕವಾಗಿದೆ.

**ಸುಖನಾಸಿ**: ಈ ಸುಖನಾಸಿಯು ಗರ್ಭಗೃಹದಷ್ಟೇ ಉದ್ದ ಮತ್ತು ಅಗಲವಾದ ವಿಸ್ತೀರ್ಣವನ್ನು ಹೊಂದಿದ್ದು ಮೂಲ ಗರ್ಭಗೃಹಕ್ಕೆ ಹೊಂದಿಕೊಂಡಂತಿದೆ ಹಾಗೂ ಇದರ ಬಲಭಾಗದ ಕಕ್ಷಾಸನದಲ್ಲಿ ಶ್ರೀರಾಮಾನುಜಾಚಾರ್ಯರ ಕಂಚಿನ ವಿಗ್ರಹಗಳನ್ನು ಇಡಲಾಗಿದ್ದು ಇದರ ನಾಲ್ಕು ಅಲಂಕರಣೆ ಕಾಣಬರುವುದಿಲ್ಲ.

**ಎರಡನೇ ಗರ್ಭಗೃಹ**: ಗರ್ಭಗೃಹವು ಸು. 5 ಅಡಿ ಉದ್ದ ಮತ್ತು 5 ಅಡಿ ಅಗಲವಾದ ವಿಸ್ತೀರ್ಣವನ್ನು ಹೊಂದಿದ್ದು ಉತ್ತರಾಭಿಮುಖವಾಗಿದೆ. ಇದರ ಬಲಪಾರ್ಶ್ವದಲ್ಲಿ ಸುಂದರವಾದ ಪೀಠದ ಮೇಲೆ ಐದು ಅಡಿ ಎತ್ತರದ ವೇಣುಗೋಪಾಲನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದ್ದು ಸಮಭಂಗಿಯಲ್ಲಿದ್ದಾನೆ. ಇದರ ಮೇಲ್ಭಾಗದಲ್ಲಿ ೩ ಅಡಿ ಆಳವಾದ ಭುವನೇಶ್ವರಿಯಿದ್ದು ಕಮಲದ ಮೊಗ್ಗುಗಳನ್ನು ಸುತ್ತುವರಿದಂತೆ ವಿಶಾಲವಾಗಿರುವುದನ್ನು ಕಾಣಬಹುದು.

**ಮೂರನೇ ಗರ್ಭಗೃಹ**: ಈ ಗರ್ಭಗೃಹವು ಸು. 5 ಅಡಿ ಉದ್ದ ಮತ್ತು 5 ಅಡಿ ಅಗಲವಾದ ವಿಸ್ತೀರ್ಣವನ್ನು ಹೊಂದಿದ್ದು ದಕ್ಷಿಣಾಭಿಮುಖವಾಗಿದೆ. 1.5 ಅಡಿ ಎತ್ತರದ ವೃತ್ತಾಕಾರದ ಪೀಠದ ಮೇಲೆ ೩.5 ಅಡಿ ಎತ್ತರದ ಲಕ್ಷ್ಮೀನರಸಿಂಹ ಸ್ವಾಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಮೇಲ್ಭಾಗದಲ್ಲಿ ಹೊಯ್ಸಳ ಶೈಲಿಯ ೩ ಅಡಿ ಆಳವಾದ ಭುವನೇಶ್ವರಿಯನ್ನು ಖಂಡಿಸಲಾಗಿದ್ದು ಬಹಳ ವಿಶಿಷ್ಟ ರೀತಿಯ ಆಕರ್ಷಕ ಕಲಾ ಶೈಲಿಯಿಂದ ಕೂಡಿದೆ.

**ನವರಂಗ**: ಲಕ್ಷ್ಮೀಕಾಂತ ಸ್ವಾಮಿ ದೇವಾಲಯದ ನವರಂಗ ಮೂರು ಗರ್ಭಗುಡಿಗಳಿಗೂ ಹೊಂದಿಕೊಂಡಂತೆ ಇದ್ದು, ೯ ಅಂಕಣದಿಂದ ಕೂಡಿದೆ. ಈ ನವರಂಗದಲ್ಲಿ ನಾಲ್ಕು ಹೊಯ್ಸಳ ಶೈಲಿಯ ಕಂಬಗಳು ಅದ್ಭುತ ಕಲೆಯಿಂದ ಕೂಡಿದ್ದು, ತಿರುಗು ರಾಟೆಯಂತಿರುವ ಕಂಬಗಳಾಗಿವೆ. ಇವುಗಳು ಕಪ್ಪುಕಲ್ಲಿನಿಂದ ಕೆತ್ತಲ್ಪಟ್ಟಿರುವ ಕಂಬಗಳಾಗಿವೆ. ಈ ನವರಂಗದಲ್ಲಿ ಒಟ್ಟು ಒಂಭತ್ತು ಭುವನೇಶ್ವರಿಗಳಿದ್ದು ಒಂದೊಂದು ಭುವನೇಶ್ವರಿಯೂ ಒಂದೊಂದು ರೀತಿಯಾಗಿ ಕೆತ್ತಲ್ಪಟ್ಟಿದೆ. ಅದರಲ್ಲಿಯೂ ಮಧ್ಯದಂಕಣದಲ್ಲಿರುವ ಭುವನೇಶ್ವರಿಯೂ ಅತ್ಯದ್ಭುತವಾದ ಭುವನೇಶ್ವರಿಗಳಲ್ಲಿ ಒಂದಾಗಿದೆ.

**ನವರಂಗದ ಕಂಬಗಳು**: ನವರಂಗದಲ್ಲಿ 4 ಅಲಂಕಾರಿಕ ಕೆತ್ತನೆಯ ಕಂಬಗಳಿದ್ದು, ಹೆಸರೇ ಸೂಚಿಸುವಂತೆ ಹೊಯ್ಸಳ ಶೈಲಿಯ ಆಯಾಮಗಳನ್ನು ಒಳಗೊಂಡ ವಿಶಿಷ್ಟ ರೀತಿಯ ಕಂಬಗಳನ್ನು ಕಾಣಬಹುದು. ಈ ಕಂಬಗಳು ಚಚ್ಚೌಕಾಕಾರದ ಪೀಠವನ್ನು ಹೊಂದಿದ್ದು, ಗಂಟೆಯಾಕಾರ, ಗಾಲಿಯಾಕಾರ, ಬೋದಿಗೆಯಾಕಾರ ಕಪೋತದಾಕಾರದ ಮಾದರಿಯಲ್ಲಿ ಕಂಬವನ್ನು ನಿರ್ಮಿಸಿದ್ದು, ಗಾಲಿ ಮತ್ತು ಬೋದಿಗೆಯಲ್ಲಿ ಸಣ್ಣ ಸಣ್ಣ ಕಮಲದ ದಳದ ಆಕಾರದ ಮೊಗ್ಗನ್ನು ನಿರ್ಮಿಸಿರುವುದನ್ನು ಕಾಣಬಹುದು.

**ಭುವನೇಶ್ವರಿ**–1: ಭುವನೇಶ್ವರಿಯನ್ನು ದೇವಾಲಯದ ನವರಂಗದ ಕೇಂದ್ರ ಭಾಗದಲ್ಲಿ ಬಹಳ ಅಲಂಕಾರಭರಿತವಾಗಿ ಕೆತ್ತನೆ ಮಾಡಲಾಗಿದ್ದು, ಅಷ್ಟಕೋನಾಕಾರ ಮತ್ತು ಅಷ್ಟಮುಖದಲ್ಲಿ ಹಾಗೂ ನಕ್ಷತ್ರಾಕಾರದ ಮಾದರಿ, ಅಷ್ಟದಿಕ್ಕುಗಳ ವ್ಯವಸ್ಥೆ ಕಂಡು ಬಂದಿದ್ದು, ಒಂದೊಂದು ಮುಖದಲ್ಲಿಯೂ ಚೌಕಾಕಾರ, ನಕ್ಷತ್ರಾಕಾರ, ವಜ್ರಕಾರ, ತ್ರಿಕೋನಾಕಾರದ ಮಾದರಿಯಲ್ಲಿ ಜೋಡನೆ ಮಾಡಲಾಗಿದ್ದು ಭುವನೇಶ್ವರಿಯ ಇಕ್ಕೆಲಗಳಲ್ಲಿ ಕಮಲದ ಮೊಗ್ಗಿನ ಮಾದರಿಯ ಕೆತ್ತನೆ, ದಂತಪಂಕ್ತಿಯ ಕೆತ್ತನೆ ಖಂಡರಿಸಿರುವುದು, ಜೊತೆಗೆ ಆಧಾರ ಸ್ತಂಭವಾಗಿ, ಅಡ್ಡಪಟ್ಟಿಕೆಗಳಲ್ಲಿ ನಿರ್ಮಿಸಲಾಗಿದೆ. ಆದರೆ ಅಷ್ಟದಿಕ್ಕುಗಳಗೂ ಪಟ್ಟಿಕೆಗಳದ್ದು ಅದರಲ್ಲಿ ಯಾವುದೇ ರೀತಿಯ ಉಬ್ಬುಶಿಲ್ಪ ಕೆತ್ತನೆಗಳು ನಿರ್ಮಾಣವಾಗಿರುವುದಿಲ್ಲ. ಜೊತೆಗೆ ರಾಮಾಯಣ, ಮಹಾಭಾರತದ ದೃಶ್ಯಾವಳಿಗಳು, ದಶಾವತಾರದ ನಿರೂಪಣೆಗಳು, ಯುದ್ಧೋಪಕರಣಗಳು, ಜೊತೆಯಲ್ಲಿಲ್ಲದೇ ಸೈನಿಕ ಆಚರಣೆಯ ಮಾದರಿಯ ರೂಪುರೇಷೆಗಳ ಕೆತ್ತನೆಗಳು ನಿರ್ಮಾಣವಾಗದೇ ಇರುವುದು ಒಂದು ದುರ್ದೈವವಾದ ಸಂಗತಿ.

**ಭುವನೇಶ್ವರಿ**–**2**: ಈ ಭುವನೇಶ್ವರಿಯು ಸರಳವಾದ ಅಲಂಕರಣೆಯಿಂದ ಕೂಡಿದ್ದರೂ ಸಹ ಅಷ್ಟಕಾರ, ಚೌಕಾಕಾರ, ತ್ರಿಭುಜಾಕಾರ, ವೃತ್ತಾಕಾರದ ಮಾದರಿಯಲ್ಲಿ ನಿರ್ಮಾಣವಾಗಿದ್ದು, ಇಕ್ಕೆಲಗಳಲ್ಲಿ ದಂತಪಂಕ್ತಿಯಿದ್ದು ಹೊಯ್ಸಳ ಶೈಲಿಯ ಎಲ್ಲ ಮಾದರಿಯನ್ನು ಒಳಗೊಂಡಿದ್ದು, ಹೊಯ್ಸಳ ಲಾಂಛನದ ದೃಶ್ಯಗಳು, ವಾನರರ ದೃಶ್ಯಗಳು ಮತ್ತು ಅರಳಿದ ಕಮಲದ ಮೊಗ್ಗುಗಳುಳ್ಳ ಚಿತ್ರಗಳ ಕೆತ್ತನೆ, ಹೂ–ಲತಾಬಳ್ಳಿಗಳು, ಮಕರ ತೋರಣದ ಮಾದರಿಯ ಕೆತ್ತನೆಯನ್ನೊಳಗೊಂಡಿದ್ದು, ಅರಳಿದ ಕಮಲದ ದಳದಂತೆ ಮಧ್ಯದಲ್ಲಿ ಚಿತ್ರವನ್ನು ಬಿಡಿಸಿದ್ದು, ಅದಕ್ಕೆ ಹೊಂದಿಕೊಂಡಂತೆ ಬಾಳೆಗೊನೆಯಾಕಾರದ ಮೊಗ್ಗನ್ನು ಕೆಳಗೆ ಇಳಬಿಟ್ಟಂತೆ ಕೆತ್ತನೆ ಮಾಡಿರುವುದನ್ನು ಇಲ್ಲಿ ಕಾಣಬಹುದು.

**ಭುವನೇಶ್ವರಿ**–**3**: ಈ ಭುವನೇಶ್ವರಿಯು ಸರಳವಾದ ಅಲಂಕರಣೆಯ ಕೆತ್ತನೆಗಳಿಂದ ಕೂಡಿದ್ದು, ಪೀಠ, ವೃತ್ತಾಕಾರ, ಅಷ್ಟಮುಖ, ಪಟ್ಟಿಕೆ, ಕಳಸದ ಮಾದರಿ, ವೃತ್ತಾಕಾರದ ಗಾಲಿ, ಕಪೋತ, ಬೋಧಿಗೆಯನ್ನು ಒಳಗೊಂಡಿದ್ದು ವಾನರ ದೃಶ್ಯಗಳು, ಸಿಂಹದ ದೃಶ್ಯಗಳು, ಹೂ ಲತಾಬಳ್ಳಿಗಳು, ಹಾಗೂ ಮಧ್ಯದಲ್ಲಿ ಕಮಲ ದಳವನ್ನು ಒಳಗೊಂಡಿದ್ದು, ಮುಂದೆ ಸ್ವಲ್ಪ ಉಬ್ಬಿಕೊಂಡಂತೆ ಗೋಚರಿಸಿದೆ.

**ಭುವನೇಶ್ವರಿ**–**4**: ಈ ಭುವನೇಶ್ವರಿಯು 16 ದಂತಪಂಕ್ತಿಗಳಿಂದ ಕೂಡಿದ್ದು, ಸರಳವಾದ ಕೆತ್ತನೆಯನ್ನು ಹೊಂದಿದ್ದು ಸರಪಳಿಯಾಕಾರ ಮತ್ತು ವೃತ್ತಾಕಾರವಾಗಿದೆ. ಕಮಲದ ಹೂವಿನಂತಿರುವ ಮಧ್ಯಭಾಗವು ಗುಬ್ಬಿಯಂತೆ ಉಬ್ಬಿಕೊಂಡಿದೆ. ಇದು ಅಷ್ಟಪಟ್ಟಿಕೆಗಳಿಂದ ಕೂಡಿದ್ದು ಈ ಸರಪಳಿಯ ಮಧ್ಯಭಾಗದಲ್ಲಿ ದೇವಕನ್ಯೆಯರ ಶಿಲ್ಪಗಳ ಮತ್ತು ಯುದ್ಧದ ಸನ್ನಿವೇಶದ ದೃಶ್ಯಾವಳಿಗಳ ಶಿಲ್ಪಗಳನ್ನು ಕೆತ್ತಲಾಗಿದೆ.

**ಗರುಡಗಂಭ**: ಈ ದೇವಾಲಯದಲ್ಲಿ ಸುಮಾರು 15 ಅಡಿಗಳ ಉದ್ದದ ಗರುಡಗಂಭವಿದೆ. ಇದನ್ನು ಹೊನ್ನೆ ಮರದಿಂದ ಮಾಡಿದ್ದು, ಇದಕ್ಕೆ ಹಿತ್ತಾಳೆಯ ಲೇಪನವನ್ನು ಮಾಡಲಾಗಿದೆ.

**ಅಧಿಷ್ಠಾನ**: ಲಕ್ಷ್ಮೀಕಾಂತ ದೇವಾಲಯದ ಅಧಿಷ್ಠಾನದ ಭಾಗವು 7 ಪಟ್ಟಿಕೆಗಳಿಂದ ಕೂಡಿದ್ದು, ಹಿನ್ಸರಿತ ಮತ್ತು ಮುನ್ಸರಿತದಿಂದ ಕೂಡಿದೆ. ಜೊತೆಗೆ ಈ ದೇವಾಲಯದ ಮೂರು ಮೂಲೆಗಳಲ್ಲೂ ಪ್ರನಾಳವನ್ನು ನಿರ್ಮಿಸಲಾಗಿದ್ದು. ಅಧಿಷ್ಠಾನದ ಕೆಳಗಡೆ ಶಾಸನದ ಸಾಲುಗಳನ್ನು ಕಂಡರಿಸಲಾಗಿದೆ.

**ಭಿತ್ತಿ**: ಭಿತ್ತಿಯ ಭಾಗವು 2 ಹಂತಗಳಲ್ಲಿ ನಿರ್ಮಾಣವಾಗಿದ್ದು, ಮೊದಲ ಹಂತದಲ್ಲಿ ಯಾವುದೇ ಅಲಂಕರಣೆ ಕಂಡು ಬರುವುದಿಲ್ಲ. ಮಧ್ಯ-ಮಧ್ಯದಲ್ಲಿ ಸರಳವಾದಂತಹ ಅರೆಗಂಬಗಳ ಪಟ್ಟಿಕೆಗಳನ್ನು ಸೇರಿಸಿದ್ದಾರೆ. ಈ ಎರಡು ಹಂತಗಳ ಮಧ್ಯದಲ್ಲಿ ಕಪೋತದ ರೀತಿಯ ಛಾವಣಿಯನ್ನು ಹೊದಿಸಲಾಗಿದೆ. 2ನೇ ಹಂತದಲ್ಲಿ ಒಂದು ಅಡಿ ಅಂತರದಲ್ಲಿ ಕಂಬದ ಮಾದರಿ ಹಾಗೂ ಅರೆಗಂಭಗಳನ್ನು ನಿರ್ಮಾಣ ಮಾಡಿದ್ದಾರೆ. ಜೊತೆಗೆ ಈ ಅರೆಗಂಬಗಳ ಮಧ್ಯದಲ್ಲಿ ಶಿಖರದ ಮಾದರಿಯ ಇದರ ಮೇಲೆ ಕಪೋತದ ಮಾದರಿಯ ಕೋಷ್ಠ ಗುಡಿಯನ್ನು ಭಿತ್ತಿಯಲ್ಲಿ ಕೆತ್ತನೆ ಮಾಡಿದ್ದಾರೆ. ಜೊತೆಗೆ ಜೋಡಣೆಯಲ್ಲಿ ಹಿನ್ಸರಿತ ಮತ್ತು ಮುನ್ಸರಿತಗಳ ಪಟ್ಟಿಕೆಗಳನ್ನು ಅಲ್ಲಲ್ಲಿ ನಿರ್ಮಿಸಿದ್ದಾರೆ.

**ಹಾರ**: ಹಾರವು ಸರಳವಾಗಿದ್ದು ಯಾವುದೇ ರೀತಿಯ ಅಲಂಕರಣೆ ಹೊಂದಿರುವುದಿಲ್ಲ. ಇದರ ಮೇಲ್ಪಂಕ್ತಿಯಲ್ಲಿ ಅಡ್ಡಪಟ್ಟಿಕೆಗಳನ್ನು ನಿರ್ಮಿಸಿರುವುದು ಪ್ರಸ್ತುತದಲ್ಲಿ ಕಂಡು ಬರುತ್ತದೆ.

**ಶಿಖರ**: ಶಿಖರದ ಭಾಗದಲ್ಲಿಯೂ ಕೂಡ ಅಧಿಷ್ಠಾನ, ಭಿತ್ತಿ, ಕಪೋತ, ಹಾರ, ಗ್ರೀವ ಇವುಗಳ ಜೋಡಣೆಯೊಂದಿಗೆ ದಂತಪಂಕ್ತಿಯ ರೀತಿಯಲ್ಲಿ ಹಿನ್ಸರಿತ ಮತ್ತು ಮುನ್ಸರಿತದಿಂದ ಕೂಡಿದೆ. ಜೊತೆಗೆ ಇಕ್ಕೆಲಗಳಲ್ಲಿ ಅರೆಗಂಬಗಳ ಮೂಲ ವ್ಯವಸ್ಥೆಯನ್ನು ಹಾಗೆಯೇ ಉಳಿಸಿರುವುದು ಕಂಡುಬರುತ್ತದೆ. ಶಿಖರದ ಭಾಗವು 5 ಪಟ್ಟಿಕೆಗಳಿಂದ ಕೂಡಿದ್ದು, ಎಲ್ಲವೂ ಕೂಡ ಸಾಧಾರಣವಾಗಿದ್ದು, ಆ ಪಟ್ಟಿಕೆಗಳಲ್ಲಿ ದಂತಪಂಕ್ತಿಯ ಫಲಕಗಳನ್ನು ನಿರ್ಮಾಣ ಮಾಡಿದ್ದಾರೆ. ಆದರೆ ಯಾವುದೇ ರೀತಿಯ ಕೆತ್ತನೆ ಕಂಡು ಬರುವುದಿಲ್ಲ. ಇದರ ಮೇಲ್ಭಾಗದಲ್ಲಿ ಕಳಸವನ್ನು ನಿರ್ಮಿಸಿರುವುದನ್ನು ಕಾಣಬಹುದು.

ಒಟ್ಟಾರೆ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಹೊಯ್ಸಳರ ಕಾಲದ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಈ ದೇವಾಲಯ ವಾಸ್ತುಶಿಲ್ಪದ ಸೊಬಗನ್ನು ಕಲಾತ್ಮಕವಾಗಿ ಬಿಂಬಿಸುವ ಪ್ರತೀಕವಾಗಿದೆ ಎಂದು ಹೇಳಬಹುದು.

**ಛಾಯಾಚಿತ್ರಗಳು**



**ಲಕ್ಷ್ಮೀಕಾಂತ ದೇವಾಲಯ**



**ನವರಂಗ**



**ಭುವನೇಶ್ವರಿ**



**ದೇವಾಲಯದ ಶಿಖರ**

**ಪರಾಮರ್ಶನ ಗ್ರಂಥಗಳು:**

1. ಡಾ.ಮಂಜುಳ ಹುಲ್ಲಹಳ್ಳಿ–ನಂಜನಗೂಡು ತಾಲೂಕು ಗೆಜೆಟಿಯರ್, 2017.
2. ಮಲೆಯೂರು ಗುರುಸ್ವಾಮಿ–ಜಂಗಮ, ಮೈಸೂರು, 1997–98.
3. ಡಾ.ಮಂಜುಳ ಹುಲ್ಲಹಳ್ಳಿ–ನಂಜನಗೂಡು ತಾಲೂಕಿನ ಸಾಂಸ್ಕೃತಿಕ ಅಧ್ಯಯನ, ಮೈಸೂರು, 2000
4. ಕೂ.ಸ.ಅಪರ್ಣ–ದೇವಾಲಯದ ವಾಸ್ತು ಪರಿಚಯ, ಹಂಪಿ, 1999
5. ಶ್ರೀಕಂಠಶಾಸ್ತ್ರಿ, ಎಸ್.–ಹೊಯ್ಸಳ ವಾಸ್ತುಶಿಲ್ಪ, ಮೈಸೂರು, 1986
6. ಪ್ರಭಾಕರ.ಎಂ.ಎನ್.–ದೇವಾಲಯ ವಾಸ್ತು ಪರಿಚಯ. ಹಂಪಿ. 1999
7. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯನ್ನು ಆಧರಿಸಿ ಬರೆಯಲಾಗಿದೆ.